# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 231 | Pages. 2 | Date: 23-08-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 231 - ಪುಟಗಳು : 2 | 23-08-2026 ಭಾನುವಾರ | Ph: 8762954248 | ದರ : ₹1


## ನೈಸ್ ಹೆಸರಲ್ಲಿ ಅಕ್ರಮ ಅವ್ಯಾಹತ

### ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ | ಕಾಂಗ್ರೆಸ್ ವಿರುದ್ಧ ವಾಗ್ದಾಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಹೆಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಆಗಿದ್ದಾಗ ನೈಸ್ ರಸ್ತೆ ಯೋಜನೆಗೆ ಒಡಂಬಡಿಕೆ ಮಾಡಿಕೊಂಡಿದ್ದರಾದರೂ ಗಡುವು ಮುಗಿದರೂ ನಂತರ ಅದನ್ನೇ ಮುಂದುವರಿಸಿ ಸಾವಿರಾರು ಕೋಟಿ ರೂ. ಲೂಟಿ ಮಾಡಲಾಗುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ತಾಲೂಕಿನ ಹರದನಹಳ್ಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವೇಗೌಡರು ಸಿಎಂ ಆಗಿದ್ದಾಗ 18 ತಿಂಗಳ ಅವಧಿಯ ಎಂಒಯುಗೆ ಸಹಿ ಹಾಕಿ ಹೋಗಿದ್ದರು. ಆದರೆ ನಂತರ ಬಂದ ಸರ್ಕಾರಗಳು ನೈಸ್ ಕಂಪನಿ ಮಾಲೀಕರಿಗೆ ರೆಡ್ ಕಾರ್ಪೆಟ್ ಹಾಕಿ, ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿವೆ. ಬಿಎಂಐಸಿಪಿ (ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್) ಪ್ರಾಧಿಕಾರ ರಚಿಸಿ, ಅದರ ಅಧ್ಯಕ್ಷರಾಗಿದ್ದವರು ಯೋಜನೆಗೆ ಸಂಬಂಧಿಸಿದ ಹಲವು ನಿರ್ಧಾರಗಳಿಗೆ ಕಾರಣರಾಗಿದ್ದಾರೆ ಎಂದರು.

ಸರ್ಕಾರದ ಜುಟ್ಟು, ಜನಿವಾರ ಎಲ್ಲವನ್ನೂ ನೈಸ್ ಕಂಪನಿ ಕೈಗೆ ಕೊಟ್ಟಿದ್ದೀರಿ. ಅಧಿಕಾರಿಗಳು ಅವರಿಗೆ ಬೇಕಾದ ರೀತಿಯಲ್ಲಿ ನ್ಯಾಯಾಲಯಗಳಿಗೆ ತಪ್ಪು ವರದಿ ನೀಡುವಂತೆ ಚಿತಾವಣೆ ನಡೆಸಿ ರೈತರನ್ನು ಬೀದಿಗೆ ತಳ್ಳಿದ್ದೀರಿ ಎಂದು ದೂರಿದರು.

ನೈಸ್ ಯೋಜನೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ 20 ವರ್ಷ ಕಳೆದರೂ ಪರಿಹಾರ ದೊರೆತಿಲ್ಲ. ರೈತರ ಭೂಮಿ ಪಡೆದು ಎಲ್ಲೆಲ್ಲಿ ಜಂಟಿ ಯೋಜನೆ ಕೈಗೊಳ್ಳಲಾಗಿದೆ, ಎಲ್ಲೆಲ್ಲಿ ಭೂಮಿ ಮಾರಾಟ ಮಾಡಲಾಗಿದೆ ಎಂಬ ಸತ್ಯಾಂಶ ಸರ್ಕಾರದ ಮುಂದೆ ಇಲ್ಲವೇ, ಈ ವಿಚಾರದಲ್ಲಿ ಏಕೆ ಜಾಣ ಮೌನಕ್ಕೆ ಶರಣಾಗಿದ್ದೀರಿ ಎಂದು ಸರ್ಕಾರವನ್ನು ಪ್ರಶ್ನಿಸಿದರು.

ನೈಸ್ ಕಂಪನಿ ತನ್ನ ಯೋಜನಾ ಕಾರ್ಯ



#### ಬಿಡದಿ ಟೌನ್ ಶಿಪ್ ತನಿಖಾ ಸಮಿತಿಗೆ ಆಕ್ಷೇಪ

ಬಿಡದಿ ಟೌನ್‌ಶಿಪ್ ಯೋಜನೆ ಸಂಬಂಧ ಸರ್ಕಾರ ರಚಿಸಿರುವ ಸಮಿತಿಯ ಉದ್ದೇಶವೇನು ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಆ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಉದ್ದೇಶದ ಸರ್ಕಾರವೇ ಸ್ಪಷ್ಟಪಡಿಸಬೇಕು, ಈಗ ಸಮಿತಿ ಮುಖ್ಯಸ್ಥರಾಗಿರುವ ನಿವೃತ್ತ ನ್ಯಾಯಾಧೀಶರು, ಹಿಂದೆ ಈಗಲ್‌ಟನ್ ಗಾಲ್ಫ್ ಕ್ಲಬ್‌ಗೆ ಸಂಬಂಧಿಸಿದ ಭೂಮಿ ವಿಚಾರ ಪ್ರಕರಣದಲ್ಲಿ ತೀರ್ಪು ನೀಡಿದ್ದರು.

ಆಗ ಸುಮಾರು 70 ಎಕರೆ ಸರ್ಕಾರಿ ಕರಾಬ್ ಭೂಮಿಗೆ ಎಕರೆಗೆ 12 ಕೋಟಿ ದರ ನಿಗದಿಪಡಿಸಲಾಗಿತ್ತು. ಒಟ್ಟು 938 ಕೋಟಿ ಪಾವತಿಸುವಂತೆ ಆಗಿನ ಸಚಿವ ಸಂಪುಟ ನಿರ್ಧರಿಸಿತ್ತು. ನಂತರ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದಾಗ, ಇದೇ ನ್ಯಾಯಾಧೀಶರು ಸಚಿವ ಸಂಪುಟದ ನಿರ್ಧಾರ ಎತ್ತಿ ಹಿಡಿದಿದ್ದರು ಎಂದು ಆರೋಪಿಸಿದರು.

ಅಂದು ಎಕರೆಗೆ 12 ಕೋಟಿ ರೂ. ನಿಗದಿಪಡಿಸಿ, ಎಕರೆಗೆ 2 ಕೋಟಿ ನೀಡುವುದು ಸೂಕ್ತವೇ, ವರದಿ ನೀಡಲು ನಿವೃತ್ತ ನ್ಯಾಯಾಧೀಶರನ್ನೇ ಸಮಿತಿ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವುದು ಹೇಗೆ ಎಂದು ಪ್ರಶ್ನಿಸಿದರು.

ಪೂರ್ಣಗೊಳಿಸುವ ಬದಲು, ನ್ಯಾಯಾಲಯದಲ್ಲಿ ಸರ್ಕಾರವನ್ನೇ ಎಳೆಯುವ ಮೂಲಕ ರಾಜ್ಯಕ್ಕೆ ಮುಖಭಂಗ ಮಾಡುತ್ತಿದೆ ಎಂದು ಟೀಕಿಸಿದರು.

ಫ್ರೇಮ್‌ವರ್ಕ್ ಒಪ್ಪಂದದ ಪ್ರಕಾರ ಟೋಲ್ ಸಂಗ್ರಹಿಸಲು ಅವಕಾಶ ವಿಲ್ಲದಿದ್ದರೂ ಕಾನೂನುಬಾಹಿರವಾಗಿ ಟೋಲ್ ವಸೂಲಿ ಮಾಡಲು ಅವಕಾಶ ನೀಡಲಾಗಿದೆ, ಸರ್ಕಾರದ ಅನುಮತಿ ಪಡೆಯದೆ ವರ್ಷದಿಂದ ವರ್ಷಕ್ಕೆ ಟೋಲ್ ದರ ಹೆಚ್ಚಿಸಲಾಗಿದೆ. 111 ಕಿಮೀ ರಸ್ತೆ ಯೋಜನೆಯಲ್ಲಿ ಕೇವಲ 5 ಕಿಮೀ ರಸ್ತೆ ನಿರ್ಮಿಸಿ ಟೋಲ್ ಸಂಗ್ರಹಿಸಲಾಗುತ್ತಿದೆ. ಇದುವರೆಗೆ ಸುಮಾರು 2,000 ಕೋಟಿ ಟೋಲ್ ಸಂಗ್ರಹಿಸಲಾಗಿದೆ ಎಂದು ಮತ್ತೆ ದೂರಿದರು.

ಸರ್ಕಾರವೇ ನೈಸ್ ಮಾಲೀಕರೊಂದಿಗೆ ಶಾಮೀಲಾಗಿದೆ ಎಂದು ಆರೋಪಿಸಿದ ಅವರು, ಅನ್ಯಾಯವನ್ನು ಜನರ ಮುಂದೆ ತರುವುದು ತಮ್ಮ ಕರ್ತವ್ಯ. ತಾವು ಯಾವುದೇ ಹುಡುಗಾಟ ಮಾಡಿಲ್ಲ ಎಂದರು.

ರಾಜೀನಾಮೆ ವಿಚಾರ: ಸಚಿವ ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ನಡೆಯುತ್ತಿರುವ

> ಬಿಡದಿ ಟೌನ್‌ಶಿಪ್‌ಗಾಗಿ ಭೂಮಿಯ ಮೌಲ್ಯ ಹಾಗೂ ಪರಿಹಾರ ಕುರಿತು ಸರ್ಕಾರಕ್ಕೆ ಸ್ಪಷ್ಟತೆ ಇಲ್ಲ, ನೀವೇ ದುಡ್ಡು ಮಾಡಲು ಹೊರಟಿದ್ದೀರೋ ಅಥವಾ ದುಡ್ಡು ಮಾಡುವವರಿಗೆ ಬೆಂಬಲ ನೀಡಲು ಹೊರಟಿದ್ದೀರೋ. ಕಾನೂನು ಬಾಹಿರವಾಗಿ ಭೂಮಿ ಲೂಟಿ ಮಾಡುವ ಪ್ರಯತ್ನ ನಡೆದರೆ ಮೌನವಾಗಿರಲು ಸಾಧ್ಯವಿಲ್ಲ. ಒಂದು ಪಕ್ಷದ ಅಧ್ಯಕ್ಷನಾಗಿ ಸರ್ಕಾರ ತಪ್ಪು ಮಾಡಿದಾಗ ಅದನ್ನು ಪ್ರಶ್ನಿಸುವುದು ತಮ್ಮ ಕರ್ತವ್ಯ.
>
> **- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ಹೋರಾಟ ಸಮರ್ಥಿಸಿಕೊಂಡ ಹೆಚ್ಡಿಕೆ, ನಾಗೇಂದ್ರ ಅವರು ಹಿಂದೆ ಸಚಿವರಾಗಿದ್ದಾಗ ಅವ್ಯವಹಾರ ನಡೆದಿರುವುದು 189 ಕೋಟಿಯಲ್ಲ, 84 ಕೋಟಿ ಎಂದು ಅಂದಿನ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದರು.

ಆಗ ರಾಜೀನಾಮೆ ಪಡೆದ ವ್ಯಕ್ತಿಯನ್ನೇ ಮತ್ತೆ ಸಚಿವರನ್ನಾಗಿ ಮಾಡಿದರೆ ರಾಜ್ಯದ ಜನತೆಗೆ ಸರ್ಕಾರ ಯಾವ ಸಂದೇಶ ನೀಡುತ್ತದೆ ಎಂದು ಪ್ರಶ್ನಿಸಿದರು. ಇವತ್ತು ಸದನ ನಡೆಯುದಿರುವುದಕ್ಕೆ ರಾಜ್ಯ ಸರ್ಕಾರವೇ ಕಾರಣ, ರಾಜ್ಯದಲ್ಲಿ ಬರಗಾಲವಿದ್ದರೂ ಈ ಬಗ್ಗೆ ಚರ್ಚೆ ನಡೆಯದಂತೆ ಸರ್ಕಾರವೇ ತೀರ್ಮಾನಿಸಿಕೊಂಡಿದೆಯೇ ಎಂಬ ಅನುಮಾನ ಮೂಡಿದೆ.

ಬೆಳೆ ವಿಮೆ ಬರುತ್ತಿಲ್ಲ, ರೈತರ ಆತ್ಮಹತ್ಯೆ ನಡೆಯುತ್ತಿದ್ದರೂ ಸರ್ಕಾರ ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಅಧಿಕಾರಕ್ಕೆ ಬಂದಂದಿನಿಂದ ರೈತರ ಸಮಸ್ಯೆ ಬಗ್ಗೆ ಯಾವತ್ತಾದರೂ ಚರ್ಚೆ ಮಾಡಿದ್ದಾರಾ, ರೈತರಿಗೆ ಆತ್ಮಸ್ಥೈರ್ಯ ತುಂಬಿದ್ದಾರಾ ಎಂದು ಪ್ರಶ್ನಿಸಿದ ಅವರು, ಕೇವಲ ಬೆಂಗಳೂರು ಸುತ್ತಮುತ್ತಲೇ ಹೆಚ್ಚು ಗಮನ ಹರಿಸುತ್ತಿದ್ದಾರೆ ಎಂದು ಕುಟುಕಿದರು.

## ನಾಯಿ ಕೊಂದು ಹಾಕಿದ ಚಿರತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೆತ್ತೂರು: ಹೋಬಳಿಯ ಹೊಂಗಡಹಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಯನೂರು ಗ್ರಾಮದಲ್ಲಿ ಚಿರತೆಯೊಂದು ಸಾಕು ನಾಯಿಯನ್ನು ತಿಂದು ಹಾಕಿದೆ.

ಗ್ರಾಮದ ಸಂದೀಪ್ ಎಂಬುವರು ಮನೆಯ ಅಂಗಳದಲ್ಲಿ ಶುಕ್ರವಾರ ತಡರಾತ್ರಿ ಮನೆ ಮುಂಭಾಗದಲ್ಲಿ ಸರಪಳಿಯಿಂದ ನಾಯಿಯನ್ನು ಕಟ್ಟಿದ್ದರು. ಬೆಳಿಗ್ಗೆ ನೋಡಿದಾಗ ನಾಯಿ ಮೃತಪಟ್ಟಿರುವುದು ಗೊತ್ತಾಗಿದೆ.

ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ರಾತ್ರಿ ವೇಳೆ ಒಂಟಿಯಾಗಿ ಮನೆಯಿಂದ ಹೊರಗೆ ಹೋಗದಂತೆ ಹಾಗೂ ಸಾಕು ಪ್ರಾಣಿಗಳನ್ನು ಸುರಕ್ಷಿತವಾಗಿ ಮನೆಯೊಳಗೆ ಇರಿಸುವಂತೆ ನಿವಾಸಿಗಳಿಗೆ ಸೂಚಿಸಲಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಪ್ರದೇಶದ ಮೇಲೆ ನಿಗಾ ವಹಿಸುತ್ತಿದ್ದಾರೆ.



ಈ ಭಾಗದಲ್ಲಿ ಚಿರತೆ ಸಂಚಾರ ಇದೆ ಎಂಬ ಸುದ್ದಿಗಳ ನಡುವೆಯೇ ರಾತ್ರಿ ವೇಳೆ ನಡೆದ ಈ ಘಟನೆ ಸ್ಥಳೀಯರಲ್ಲಿ ಇನ್ನಷ್ಟು ಆತಂಕ ಮೂಡಿಸಿದೆ. ಇದೇ ವೇಳೆ ಈ ಪರಿಸರದಲ್ಲಿ ಮತ್ತಷ್ಟು ಚಿರತೆಗಳ ಸಂಚಾರವಿದೆ ಎಂಬ ಅನು ಮಾನವೂ ಕಾಡುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣವೇ ಸೂಕ್ತ ಕ್ರಮ ಕೈಗೊಂಡು, ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಶ್ರಾವಣ ಶನಿವಾರ: ಹೆಚ್.ಡಿ.ಕೆ. ವಿಶೇಷ ಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಶನಿವಾರ ಶ್ರಾವಣ 2ನೇ ಶನಿವಾರ ಹಿನ್ನೆಲೆಯಲ್ಲಿ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಕುಟುಂಬ ಸದಸ್ಯರಾದ ಭವಾನಿ ರೇವಣ್ಣ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಸಹ ಪೂಜೆಯಲ್ಲಿ ಭಾಗವಹಿಸಿದ್ದರು. ಕುಟುಂಬ ಸದಸ್ಯರೊಂದಿಗೆ ರಂಗನಾಥಸ್ವಾಮಿಗೆ ಅಭಿಷೇಕ ನೆರವೇರಿಸಿದ ಭವಾನಿ ರೇವಣ್ಣ, ಸುಮಾರು ಒಂದು ಗಂಟೆ ಗರ್ಭಗುಡಿಯಲ್ಲಿ ಕುಳಿತು ಪೂಜೆ ಸಲ್ಲಿಸಿದರು. ಈ ವೇಳೆ ಕೈಮುಗಿದು ಕುಳಿತಿದ್ದ ಭವಾನಿ ರೇವಣ್ಣ ಅವರು ಭಾವುಕರಾದರು.

ಪೂಜೆಯುದ್ದಕ್ಕೂ ಕಣ್ಣೀರು ಹರಿಸುತ್ತಲೇ ದೇವರ ಆರಾಧನೆಯಲ್ಲಿ ಭಾಗವಹಿಸಿದರು.

## ಟ್ರ್ಯಾಕ್ಟರ್ ಹರಿದು ತಂದೆ ಸಾವು: ಮಗು ಪಾರು

ಹೊಳೆನರಸೀಪುರ: ರಸ್ತೆ ಬದಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಮೇಲಿದ್ದ ಮೂರು ವರ್ಷದ ಮಗು ಗೊತ್ತಿಲ್ಲದೆ ಕೀ ತಿರುಗಿಸಿದ ಪರಿಣಾಮ ಚಕ್ರಕ್ಕೆ ಸಿಲುಕಿ ಮಗುವಿನ ತಂದೆ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಅರಕಲಗೂಡು ಕೆಎಸ್‌ಆರ್‌ಟಿಸಿ ಡಿಪೋ ಉದ್ಯೋಗಿ ಹೆಚ್.ಡಿ.ಯಶವಂತ್ (36) ಮೃತರು. ಪಟ್ಟಣದಲ್ಲಿ ಮನೆ ನಿರ್ಮಾಣ ಕಾಮಗಾರಿ ಕೈಗೊಂಡಿದ್ದ ಯಶವಂತ್ ಟ್ರ್ಯಾಕ್ಟರ್ ನಲ್ಲಿ ಸೆಂಟರಿಂಗ್ ಸಾಮಾಗ್ರಿ ತುಂಬಿಕೊಂಡು ಬಂದು ಮನೆ ಮುಂದೆ ನಿಲ್ಲಿಸಿದ್ದರು. ನಂತರ ಆಟವಾಡುತ್ತಾ ಓಡೋಡಿ ಬಂದ ಮಗುವನ್ನು ಎತ್ತಿಕೊಂಡು ಅಲ್ಲೇ ಕುಳಿತಿದ್ದರು. ಈ ವೇಳೆ ಮಗುವಿಗೆ ಗೊತ್ತಾಗದೆ ಕೀ ತಿರುಗಿಸಿದ್ದು ಇಳಿಜಾರಿನಲ್ಲಿದ್ದ ಟ್ರ್ಯಾಕ್ಟರ್ ಮುಂದಕ್ಕೆ ಚಲಿಸಿದೆ. ಮಗು ಕೆಳಗೆ ಬೀಳುತ್ತದೆ ಎಂದು ಯಶವಂತ್ ಹಿಡಿಯಲು ಹೋದಾಗ ಆಯತಪ್ಪಿ ಚಕ್ರದಡಿ ಸಿಲುಕಿದ್ದಾರೆ. ತಲೆ ಹಾಗೂ ಎದೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆಯಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹಿಮ್ಸ್‌ಗೆ ಕರೆತರುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಮಗು ಪ್ರಾಣಾಪಾಯದಿಂದ ಪಾರಾಗಿದೆ.

ಯಾವುದೇ ಸಂಚಾರ ನಿಯಮ ಪಾಲಿಸದೆ, ಹ್ಯಾಂಡ್ ಬ್ರೇಕ್ ಹಾಕದೆ ಇರುವುದೇ ಅವಘಡಕ್ಕೆ ಕಾರಣವಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗ್ರಾ.ಪಂ. ಮೀಸಲಾತಿಗೆ ರೇವಣ್ಣ ಸಿಡಿಮಿಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮ ಪಂಚಾಯಿತಿ ಮೀಸಲಾತಿ ಅಧಿಸೂಚನೆಯಲ್ಲಿ ಜಿಲ್ಲಾಧಿಕಾರಿ ಭಾರೀ ತಾರತಮ್ಯ ಮಾಡಿದ್ದು ಅವರ ಧೋರಣೆ ಖಂಡಿಸಿ ಜೆಡಿಎಸ್‌ನಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಜಿಲ್ಲಾಡಳಿತ ವಿರುದ್ಧ ಸೋಮವಾರ ಪ್ರತಿಭಟನೆ ನಡೆಸಲಾಗುವುದು. ನ್ಯಾಯ ಸಿಗದಿದ್ದರೆ ನ್ಯಾಯಾಲಯ ಮೆಟ್ಟಿಲೇರಲು ತಯಾರಿದ್ದೇವೆ. ತಹಶೀಲ್ದಾರ್ ಸರಿಯಾಗಿ ಪಟ್ಟಿ ಸಲ್ಲಿಸದಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಿ. ಅದನ್ನು ಬಿಟ್ಟು ಒಂದು ಗ್ರಾಮ ಪಂಚಾಯಿಯ 7-8 ಕ್ಷೇತ್ರಗಳ ಮೀಸಲಾತಿಯನ್ನು ಬದಲಾಯಿಸಿದ್ದು ಏಕೆ ಎಂದು ಪ್ರಶ್ನಿಸಿದರು.

ನನ್ನ 30 ವರ್ಷದ ರಾಜಕೀಯ ಜೀವನದಲ್ಲಿ ಇಂತಹ ಜಿಲ್ಲಾಧಿಕಾರಿಯನ್ನು ನೋಡಿಲ್ಲ. ಯಾವ ಆಧಾರದ ಮೇಲೆ ತಹಶೀಲ್ದಾರ್ ಕಳುಹಿಸಿದ್ದ



ಮೀಸಲಾತಿ ಪಟ್ಟಿಯನ್ನು ಬದಲಾಯಿಸಿದ್ದಾರೆ ಎಂದು ಪ್ರಶ್ನಿಸಿದ ಅವರು, ಜೆಡಿಎಸ್ ಮತದಾರರು ಹೆಚ್ಚಿರುವ ಕಡೆ ಮೀಸಲಾತಿ ಬದಲಾಯಿಸಲಾಗಿದೆ.

ಮೀಸಲಾತಿ ಅಂತಿಮ ಅಧಿಸೂಚನೆ ಹೊಡಿಸುವ ಮುನ್ನ, ಕರಡು ಪ್ರತಿಯನ್ನು ಪ್ರಕಟಿಸಬೇಕಿತ್ತು. ಆದರೆ, ಯಾವ ಆಧಾರದ ಮೇಲೆ ಜಿಲ್ಲಾಧಿಕಾರಿ ಅಂತಿಮ ಮೀಸಲಾತಿ ಪ್ರಕಟಿಸಿದ್ದಾರೆ ಎಂಬುದು ತಿಳಿದಿಲ್ಲ. ಮೀಸಲಾತಿ ವಿಚಾರದಲ್ಲಿ ಚುನಾವಣಾ ಆಯೋಗದ ಗಮನ ಸೆಳೆಯಲಾಗುವುದು. ತಹಶೀಲ್ದಾರ್ ಕಳುಹಿಸಿದ್ದ ಮೀಸಲಾತಿ ಪಟ್ಟಿಯಲ್ಲಿ ಜಿಲ್ಲಾಧಿಕಾರಿ ಮಳಲಿ ಗ್ರಾಮ ಪಂಚಾಯಿತಿಯಲ್ಲಿ 6 ಬದಲಾವಣೆ ಮಾಡಿದ್ದಾರೆ. ಅದೇ ರೀತಿ ದೊಡ್ಡಕುಂಚೇವುನಲ್ಲಿ 9, ಹರಿಹರಪುರ 4, ಹಳೇಕೋಟೆ 6, ಹಂಗರಹಳ್ಳಿ 5, ವಡ್ಡರಪಾಳ್ಯ 4, ಬಾಗಿವಾಳು 8, ಕೋಡಿಹಳ್ಳಿ 5, ಮೂಡಲಹಿಪ್ಪೆ 3, ಮಾರಗೋಡನಹಳ್ಳಿ 4, ದೊಡ್ಡಗೇಣಿಗೆರೆ 4, ದೊಡ್ಡಕಾಡನೂರು 7, ಶ್ರವಣೂರಿನಲ್ಲಿ 11, ಹಳ್ಳಿಮೈಸೂರು 7 ಹೀಗೆ ತಾಲ್ಲೂಕು ದಂಡಾಧಿಕಾರಿ ಕಳುಹಿಸಿದ್ದ ಮೀಸಲಾತಿ ಪಟ್ಟಿಯನ್ನೇ ಬದಲಾವಣೆ ಮಾಡಿದ್ದಾರೆ ಎಂದು ದೂರಿದರು.

ಯಾವ ಆಧಾರದ ಮೇಲೆ ಬದಲಾವಣೆ ಮಾಡಿದ್ದಾರೆ, ಕರಡು ಪ್ರತಿಯನ್ನು ನೀಡದೆ ಹೇಗೆ ಅಂತಿಮ ಅಧಿಸೂಚನೆ ಹೊರಡಿಸಿದ್ದಾರೆ ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್‌ನವರು ಕೇಂದ್ರದಲ್ಲಿ ಇರುವ ಚುನಾವಣಾ ಆಯೋಗ ಬಿಜೆಪಿ ಏಜೆಂಟ್ ಎಂದು ಆಪಾದಿಸುತ್ತಾರೆ. ಹಾಗಾದರೆ ಇಲ್ಲಿರುವ ಚುನಾವಣಾ ಆಯೋಗ ಯಾರ ಏಜೆಂಟ್ ಎಂದು ಪ್ರಶ್ನಿಸಿದರು.

## ಅನುಘಟ್ಟ ಪತ್ತಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಅನುಘಟ್ಟದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2025-26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ಹೆಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್ ಮಾತನಾಡಿ, ಸೊಸೈಟಿ ವತಿಯಿಂದ ಇದುವರೆಗೆ ಮೂರು ಕೋಟಿಗೂ ಅಧಿಕ ರೂ. ಸಾಲ ವಿತರಿಸಲಾಗಿದೆ. ರೈತರು ಹಾಗೂ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

ಹಸು ಸಾಕಾಣಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಮೂರು



ಲಕ್ಷ ರೂ.ವರೆಗೆ ಸಾಲ ನೀಡುವ ಯೋಜನೆ ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ಡೇರಿ ಸ್ಥಾಪಿಸುವ ಗುರಿಯನ್ನು ಹೊಂದಲಾಗಿದೆ. ಸದಸ್ಯರು ಸೊಸೈಟಿ ಮೂಲಕವೇ ರಸಗೊಬ್ಬರ ಖರೀದಿಸುವಂತೆ ಮನವಿ ಮಾಡಿದ ಅವರು, ಸೊಸೈಟಿಯಲ್ಲಿ ಠೇವಣಿ ಇಡುವುದರಿಂದ ಹೆಚ್ಚಿನ ಬಡ್ಡಿ ಲಾಭ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಪತ್ತಿನ ಸಂಘದ ಅಧ್ಯಕ್ಷ ವೀರಭದ್ರ ಶೆಟ್ಟಿ ಮಾತನಾಡಿ, ಪ್ರತಿಯೊಬ್ಬ ಸದಸ್ಯರೂ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ನೋಂದಣಿ ಮಾಡಿಸಿಕೊಳ್ಳಬೇಕು. ಸಹಕಾರ ಸಂಘದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳುವ ಸದಸ್ಯರು ರಸಗೊಬ್ಬರವನ್ನು ಖಾಸಗಿ ಮಾರಾಟಗಾರರಿಂದ ಖರೀದಿಸುವುದು ಸರಿಯಲ್ಲ. ಸೊಸೈಟಿಯಲ್ಲಿಯೇ ರಸಗೊಬ್ಬರ ಖರೀದಿಸಿದರೆ ಸಂಘಕ್ಕೂ ಲಾಭವಾಗಲಿದ್ದು, ಆ ಲಾಭದಿಂದ ಸಂಸ್ಥೆಯ ಮತ್ತಷ್ಟು ಅಭಿವೃದ್ಧಿಗೆ ಸಹಕಾರಿಯಾಗುತ್ತದೆಂದರು.

ಸಹಕಾರ ಸಂಘದ ಅಭಿವೃದ್ಧಿಯಲ್ಲಿ ಸದಸ್ಯರ ಸಹಕಾರ ಮುಖ್ಯವಾಗಿದ್ದು, ಸೊಸೈಟಿ ಮೂಲಕ ದೊರೆಯುವ ಸಾಲ, ರಸಗೊಬ್ಬರ ಹಾಗೂ ಇತರೆ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಕರೆ ನೀಡಿದರು.

ಸಭೆಯಲ್ಲಿ ಆಡಳಿತ ಮಂಡಳಿ ಉಪಾಧ್ಯಕ್ಷೆ ಹೆಚ್.ಇ.ಇಂದಿರಾ, ನಿರ್ದೇಶಕರಾದ ಕೆ.ಜಿ.ಕುಮಾರ್, ಡಿ.ಹೆಚ್.ಗೌಡ, ಎಂ.ಟಿ.ವೆಂಕಟೇಶ್, ಕೆ.ಎಸ್.ಮಂಜುನಾಥ್, ಸುಧಾ, ಬಿ.ಪಿ.ಬಸವರಾಜ್, ಬಿ.ಐ. ನಟರಾಜ್, ಸಿಇಒ ಸಿ.ಎನ್. ಸತೀಶ್, ಸಿಬ್ಬಂದಿ ಪ್ರೇಮ, ಕಿರಣ್ ಇತರರಿದ್ದರು.

## ಕಾರ್ಜುವಳ್ಳಿ ಮಠದಲ್ಲಿ ಲಕ್ಷ ಕುಂಕುಮಾರ್ಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲ್ಲೂಕಿನ ಕಾರ್ಜುವಳ್ಳಿ ಸಂಸ್ಥಾನ ಮಠದಲ್ಲಿ ಆ. 28ರ ಶುಕ್ರವಾರ ಲಕ್ಷ ಕುಂಕುಮಾರ್ಚನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನವದುರ್ಗೆ ಪರಮೇಶ್ವರಿ ಅಮ್ಮನವರಿಗೆ ಕುಂಕುಮಾರ್ಚನೆ ಸೇವೆ ಸಲ್ಲಿಸುವುದು ಪ್ರತಿ ವರ್ಷದ ವಾಡಿಕೆ. ಅಂದು ಬೆಳಿಗ್ಗೆ 10 ಗಂಟೆಯಿಂದ ಧಾರ್ಮಿಕ ಕೈಂಕರ್ಯಗಳು ಪ್ರಾರಂಭವಾಗಲಿವೆ. ಸೇವೆಯಲ್ಲಿ ಭಾಗವಹಿಸುವ ಭಕ್ತರು ನೀರಿಲ್ಲದ ಒರೆಸಿದ 5 ಬಾಳೆ ಎಲೆ, 2 ದೀಪ, 1 ಉದ್ದರಣೆ, ಮಹಾ ಮಂಗಳಾರತಿಗೆ ಭತ್ತಿ, ಕರ್ಪೂರ, ಅಗರಬತ್ತಿ, ತೆಂಗಿನಕಾಯಿ ಹಾಗೂ ಬಾಳೆಹಣ್ಣು, ಮಡಿಲಕ್ಕಿ ಹಾಗೂ ಬಾಗಿನ ಪದಾರ್ಥಗಳನ್ನು ತರಬೇಕು. ಸೇವಾ ಶುಲ್ಕ 108 ರೂ. ಪಾವತಿಸಬೇಕೆಂದು ಶ್ರೀ ಸಂಸ್ಥಾನ ಹಿರೇಮಠದ ಪೀಠಾಧ್ಯಕ್ಷ ಶ್ರೀ ಸದಾಶಿವ ಸ್ವಾಮೀಜಿ ತಿಳಿಸಿದ್ದಾರೆ.

## ಅಂಕ ಗಳಿಕೆಯೊಂದೇ ಯಶಸ್ಸಿನ ಮಾನದಂಡವಲ್ಲ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿದ್ಯಾಭ್ಯಾಸ, ಅಧಿಕ ಅಂಕ ಗಳಿಕೆಯಷ್ಟೇ ಯಶಸ್ಸಿನ ಮಾನದಂಡವಲ್ಲ. ಯುವಕರು ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ದೇಶವನ್ನು ಪ್ರತಿನಿಧಿಸುವ ಅವಕಾಶ ಸೃಷ್ಟಿಸಿಕೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಶನಿವಾರ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮತ್ತು ಕೌಡಳ್ಳಿ ಜೆಎಸ್‌ಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವತಿಯಿಂದ ನಡೆದ 2026-27ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಒಂದು ಕಾಲದಲ್ಲಿ ಒಲಿಂಪಿಕ್ಸ್ ಸೇರಿ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತಕ್ಕೆ ಒಂದೇ ಒಂದು ಪದಕ ಗೆಲ್ಲುವುದೂ ಕಷ್ಟವಾಗಿತ್ತು. ಆದರೆ ಇಂದು ಭಾರತದ ಕ್ರೀಡಾಪಟುಗಳು



ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಗೆದ್ದು ದೇಶದ ಕೀರ್ತಿ ಹೆಚ್ಚಿಸುತ್ತಿದ್ದಾರೆ. ನಿರಂತರ ಪ್ರಯತ್ನವಿದ್ದರೆ ಯಾವುದೇ ಕ್ಷೇತ್ರದಲ್ಲೂ ಸಾಧನೆ ಸಾಧ್ಯ ಎಂಬುದನ್ನು ಕ್ರೀಡಾಪಟುಗಳು ತೋರಿಸಿಕೊಟ್ಟಿದ್ದಾರೆಂದರು.

#### ಕ್ರೀಡೆ ಆರೋಗ್ಯದ ಮೂಲ

ಪ್ರತಿಯೊಬ್ಬರೂ ದಿನನಿತ್ಯದ ಜೀವನದಲ್ಲಿ ಕ್ರೀಡೆಗೆ ಆದ್ಯತೆ ನೀಡಬೇಕು. ಒಂದು ಆಟದ ಮೈದಾನ ಹತ್ತು ಆಸ್ಪತ್ರೆಗಳಿಗೆ ಸಮಾನ ಎಂಬ ಮಾತಿದೆ. ಯುವಕರ ಆರೋಗ್ಯಕರ ಜೀವನಕ್ಕೆ ಕ್ರೀಡಾಂಗಣಗಳು ಅತ್ಯವಶ್ಯಕ. ಹಿಂದೆ ಎಲ್ಲೆಡೆ ಖಾಲಿ ಜಾಗ, ಆಟದ ಮೈದಾನ ಲಭ್ಯವಿದ್ದವು. ಆದರೆ ಈಗ ಭೂಮಿಯ ಬೆಲೆ ಹೆಚ್ಚಾಗಿರುವುದರಿಂದ ಖಾಲಿ ಜಾಗಗಳೆಲ್ಲ ತಂತಿ ಬೇಲಿಗಳಿಂದ ಆವೃತವಾಗಿವೆ. ಅದರಿಂದ ಮಕ್ಕಳಿಗೆ ಆಟವಾಡಲು ಅವಕಾಶ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು.

ಹಿಂದೆ ಮಕ್ಕಳು ಶಾಲೆಯಿಂದ ಮನೆಗೆ ಬಂದು ಬ್ಯಾಗ್ ಇಟ್ಟು ಸ್ನೇಹಿತರೊಂದಿಗೆ ಆಟವಾಡಲು ತೆರಳುತ್ತಿದ್ದರು. ಯಾವ ಸಮಯಕ್ಕೆ ಮನೆಗೆ ಮರಳುತ್ತಾರೆಂಬುದರ ಬಗ್ಗೆ ತಂದೆ-ತಾಯಿಗೂ ಆತಂಕ ಕಡಿಮೆ ಇತ್ತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ ಪಾಲಕರು ಹೆಚ್ಚಿನ ಕಾಳಜಿ ವಹಿಸಬೇಕಾಗಿದೆ. ಆದ್ದರಿಂದ ಸುರಕ್ಷಿತ ಕ್ರೀಡಾಂಗಣಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದರು.

ಭಾರತದಲ್ಲಿ ಜನಿಸಿರುವುದೇ ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ವಿಶ್ವದ ಹಲವು ರಾಷ್ಟ್ರಗಳ ಪರಿಸ್ಥಿತಿಯನ್ನು ಗಮನಿಸಿದಾಗ ಭಾರತವು ಶಾಂತಿ, ಪ್ರಗತಿ ಹಾಗು ಭದ್ರತೆಯ ದೃಷ್ಟಿಯಿಂದ ಬಲಿಷ್ಠ ರಾಷ್ಟ್ರವಾಗಿ ಬೆಳೆದಿದೆ. ದೇಶ ನಮಗೆ ನೀಡಿರುವ ಅವಕಾಶಗಳು ಮತ್ತು ಸೌಲಭ್ಯಗಳ ಬಗ್ಗೆ ಪ್ರತಿಯೊಬ್ಬರೂ ಕೃತಜ್ಞತೆಯ ಭಾವನೆ ಹೊಂದಬೇಕೆಂದರು.

ನಾವು ಕಲಿತ ವಿದ್ಯೆ ಕೇವಲ ಉದ್ಯೋಗ ಪಡೆದು ಸಂಬಳ ಪಡೆಯುವುದಕ್ಕೆ ಸೀಮಿತವಾಗಬಾರದು. ತಾವು ಪಡೆದ ಜ್ಞಾನ ಹಾಗೂ ಶಿಕ್ಷಣವನ್ನು ಸಮಾಜದ ಬಡವರು, ಹಿಂದುಳಿದವರು ಸೇರಿ ದೇಶದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಗೆ ಬಳಸಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಪ್ರತಿಯೊಬ್ಬರ ಮನಸ್ಸಿನಲ್ಲಿ ಮೊದಲು ದೇಶದ ಬಗ್ಗೆ ಅಭಿಮಾನ ಮತ್ತು ಕರ್ತವ್ಯದ ಭಾವನೆ ಮೂಡಬೇಕು. ತಂದೆ-ತಾಯಿ ಎಷ್ಟು ಮುಖ್ಯವೋ, ನಮ್ಮೆಲ್ಲರನ್ನೂ ಬೆಳೆಸಿದ ದೇಶವೂ ಅಷ್ಟೇ ಮಹತ್ವದ್ದಾಗಿದೆ ಎಂದು ಹೇಳಿದರು.

ತಾಲ್ಲೂಕು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕೌಡಳ್ಳಿ ಲೋಹಿತ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜಕ ಆರ್, ಮಂಜುನಾಥ್, ಸರ್ಕಾರಿ ಬಾಲಕಿಯರ ಕಾಲೇಜಿನ ಪ್ರಾಂಶುಪಾಲ ರಮೇಶ್, ಪ್ರಾಂಶುಪಾಲ ರಜನೀಶ್ ಮತ್ತಿತರರಿದ್ದರು.

# ಜಿಲ್ಲೆಯಲ್ಲಿ 134 ಮಕ್ಕಳು ಶಾಲೆಯಿಂದ ದೂರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನ: ಶಾಲೆಗೆ ಕರೆತರುವ ಪ್ರಯತ್ನಕ್ಕೆ ಜಿಲ್ಲೆಯಲ್ಲಿ ನಿರೀಕ್ಷಿತ ಫಲಿತಾಂಶ ದೊರೆತಿಲ್ಲ. 2025-26ನೇ ಸಾಲಿನಲ್ಲಿ ಒಟ್ಟು 134 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಿಕ್ಷಕರ ಮನವೊಲಿಕೆ, ಮನೆ ಭೇಟಿ ಬಳಿಕ 29 ವಿದ್ಯಾರ್ಥಿಗಳಷ್ಟೇ ನಿತ್ಯ ಶಾಲೆಗೆ ಬರುತ್ತಿದ್ದು, ಇನ್ನು 105 ಮಕ್ಕಳು ಹಾಜರಾಗಿಲ್ಲ. ಶಾಲೆ ಬಿಟ್ಟವರಲ್ಲಿ 84 ಗಂಡು ಹಾಗೂ 48 ಹೆಣ್ಣು ಮಕ್ಕಳಿದ್ದಾರೆ. ಮುಖ್ಯ ವಾಹಿನಿಗೆ ಬಂದವರಲ್ಲಿ 12 ಬಾಲಕಿಯರು ಮತ್ತು 17 ಬಾಲಕರಿದ್ದಾರೆ.

ಶಾಲೆಯಿಂದ ಹೊರಗುಳಿದವರಲ್ಲಿ ಆಲೂರು ತಾಲ್ಲೂಕಿನ 22, ಅರಕಲಗೂಡು 2, ಅರಸೀಕೆರೆ 4, ಬೇಲೂರಿನಲ್ಲಿ ಅಧಿಕ 40, ಚನ್ನರಾಯಪಟ್ಟಣ 15, ಹಾಸನ 26, ಹೊಳೆನರಸೀಪುರ 25 ಹಾಗು ಸಕಲೇಶಪುರದಲ್ಲಿ 0 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.



### ನಿರಂತರ ಸಮೀಕ್ಷೆ

ಪ್ರತಿ ಮಗು ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕಾಗಿರುವುದರಿಂದ ಶಾಲೆಯಿಂದ ಯಾರೂ ಅಕ್ಷರ ಕಲಿಕೆಯಿಂದ ದೂರ ಉಳಿಯಬಾರದೆಂದು ಶಿಕ್ಷಣ ಇಲಾಖೆ ಪ್ರತಿವರ್ಷ ಸಮೀಕ್ಷೆ ನಡೆಸಿ ಶಾಲೆಗೆ ಕರೆತರುವ ಪ್ರಯತ್ನ ಮಾಡುತ್ತದೆ. ವಿದ್ಯಾ ವಾಹಿನಿ ಯೋಜನೆಯಡಿ ಶಾಲಾ ಶಿಕ್ಷಕರು ತಮ್ಮ ವ್ಯಾಪ್ತಿಯಲ್ಲಿ ಮನೆ ಮನೆಗೆ ತೆರಳಿ ಶಾಲೆ ಬಿಟ್ಟ ಮಕ್ಕಳ ವಿವರ ಸಂಗ್ರಹಿಸಿ ಅವರನ್ನು ಪುನ: ಕರೆತರುವ ಕೆಲಸ ಮಾಡುತ್ತಾರೆ. ಆದರೆ ಈ ವರ್ಷ ಪುನ: ಶಾಲೆಗೆ ಬಂದ ಮಕ್ಕಳ ಸಂಖ್ಯೆ ತೀರಾ ಕಡಿಮೆ ಇದೆ.

### ಶಾಲೆ ಬಿಡಲು ವಲಸೆ ಕಾರಣ

ಹಾಸನ ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಲು ವಲಸೆಯೇ ಪ್ರಮುಖ ಕಾರಣ ಎನ್ನಲಾಗಿದೆ. ಬೇಲೂರು ಭಾಗದಲ್ಲಿ 40 ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ಬರುವ ಅಸ್ಸಾಂ, ಒರಿಸ್ಸಾ ಮೂಲದ ಕಾರ್ಮಿಕರು ಕೆಲವೇ ದಿನಗಳಲ್ಲಿ ತಮ್ಮ ರಾಜ್ಯ ಅಥವಾ ಬೇರೆ ಜಿಲ್ಲೆಗಳಿಗೆ ವಲಸೆ ಹೋಗುತ್ತಾರೆ. ಹೀಗಾಗಿ ಮಕ್ಕಳ ವಿದ್ಯಾಭ್ಯಾಸಕ್ಕೆ ಹೊಡೆತ ಬೀಳುತ್ತಿದೆ. ಸಕಲೇಶಪುರ ತಾಲ್ಲೂಕಿನಲ್ಲಿ 70 ವಿದ್ಯಾರ್ಥಿಗಳು ಹೊರ ರಾಜ್ಯದವರಿದ್ದು ಅವರೆಲ್ಲರೂ ಶಾಲೆಗೆ ನಿಯಮಿತವಾಗಿ ಹಾಜರಾಗುತ್ತಿರುವುದು ಆಶಾದಾಯಕ ಬೆಳವಣಿಗೆ. ವಲಸೆ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿರುವುದರಿಂದ ಪ್ರತಿ ತಿಂಗಳು ಮಕ್ಕಳ ಸಮೀಕ್ಷೆ ನಡೆಸಲಾಗುತ್ತಿದೆ. ಯಾವ ಮಗು ಕೂಡ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಲಾಗುತ್ತಿದೆ. ಆದರೆ ಬೇಲೂರಿನಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಲು ಇನ್ನು ಅನೇಕ ಕಾರಣಗಳಿವೆ. ಪೋಷಕರ ನಿರಾಸಕ್ತಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಶಾಲೆಗೆ ಬರಲು ಅಸಡ್ಡೆ ತೋರುವುದು, ಸಾರಿಗೆ ಸಂಪರ್ಕ ಇಲ್ಲದಿರುವುದು ಹೀಗೆ ನಾನಾ ಕಾರಣಗಳಿಂದ ಭವಿಷ್ಯದ ಪ್ರಜೆಗಳು ವ್ಯಾಸಂಗದಿಂದ ದೂರ ಉಳಿಯುತ್ತಿದ್ದಾರೆ.

### ಪಾರದರ್ಶಕ ಸಮೀಕ್ಷೆ ನಡೆಯುತ್ತಿಲ್ಲ

ಶಾಲಾ ಶಿಕ್ಷಣ ಇಲಾಖೆಯು ಜಿಲ್ಲೆಯಲ್ಲಿ ಕೇವಲ 134 ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದಿದ್ದಾರೆಂಬ ಮಾಹಿತಿ ನೀಡಿದೆಯಾದರೂ ಅದು ನಿಖರವಲ್ಲ ಎಂಬುದು ಅಷ್ಟೇ ಸತ್ಯ. ಯಾವ ಶಿಕ್ಷಕ, ಸಿಆರ್‌ಪಿಗಳು ತಮ್ಮ ವ್ಯಾಪ್ತಿಯಲ್ಲಿ ಪಾರದರ್ಶಕ ಸಮೀಕ್ಷೆ ಮಾಡುವುದಿಲ್ಲ. ಹೊರ ರಾಜ್ಯದಿಂದ ದುಡಿಮೆ ಅರಸಿ ಬಂದಿರುವ ಅನೇಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಲ್ಲ. ಸಮೀಕ್ಷೆಗೆ ಹೋದಾಗ ಅಂತಹ ಮಕ್ಕಳು ಸಿಕ್ಕರೂ ಅವರ ಪೋಷಕರ ಮನವೊಲಿಸಿ ಶಾಲೆಗೆ ಕರೆತರುವ ಕೆಲಸವನ್ನು ಯಾರೂ ಮಾಡುವುದಿಲ್ಲ. ಮುತುವರ್ಜಿ ವಹಿಸಿ ಮಕ್ಕಳಿಗೆ ಪ್ರವೇಶ ನೀಡಿದರೆ ಅಂತಹ ಮಕ್ಕಳ ಎಲ್ಲಾ ಜವಾಬ್ದಾರಿಯನ್ನು ಶಾಲೆಯ ಮುಖ್ಯ ಶಿಕ್ಷಕರು ವಹಿಸಿಕೊಳ್ಳಬೇಕಾಗುತ್ತದೆ. ಮಗು ಒಂದು ದಿನ ಶಾಲೆಗೆ ಗೈರಾದರು ಅದನ್ನು ಹುಡುಕಿ ಹೋಗಬೇಕಾದ ಸಂದಿಗ್ಧತೆ ಎದುರಾಗುವ ಹಿನ್ನಲೆ ಯಾವ ಶಿಕ್ಷಕರು ಜವಾಬ್ದಾರಿಗೆ ಕೊರಳೊಡ್ಡುತ್ತಿಲ್ಲ. ಹೀಗಾಗಿ ಮಲೆನಾಡು ಭಾಗದ ಕಾಫಿ ತೋಟಗಳಲ್ಲಿ ಮಾತ್ರವಲ್ಲದೆ ಜಿಲ್ಲಾ ಕೇಂದ್ರಗಳಲ್ಲೂ ಅದೆಷ್ಟೋ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಂದು ಹೆಸರು ಹೇಳಲಿಚ್ಛಿಸದ ಶಿಕ್ಷಕರು ಹೇಳುತ್ತಾರೆ.

# ಗಿಡಗಂಟಿಗಳಿಂದ ಮುಚ್ಚಿದ ವಿದ್ಯುತ್ ಪರಿವರ್ತಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ಶ್ರೀ ಚನ್ನಕೇಶವಸ್ವಾಮಿ ದೇವಾಲಯ ಹಿಂಭಾಗದ ಪಾರ್ಕಿಂಗ್‌ನ ವಿದ್ಯುತ್ ಪರಿವರ್ತಕ ಸಂಪೂರ್ಣ ಗಿಡಗಂಟಿಗಳಿಂದ ಮುಚ್ಚಿಹೋಗಿದ್ದು ಅನಾಹುತ ಸಂಭವಿಸುವ ಮೊದಲು ತೆರವುಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ವಿಶ್ವ ವಿಖ್ಯಾತ ಪ್ರವಾಸಿ ತಾಣವಾದ ಪಟ್ಟಣದ ಶ್ರೀ ಚನ್ನಕೇಶವಸ್ವಾಮಿ ದೇಗುಲಕ್ಕೆ ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ನೂರಾರು ವಾಹನಗಳು ಇಲ್ಲಿ ನಿಲುಗಡೆಯಾಗುತ್ತವೆ. ಜನನಿಬಿಡ ಪ್ರದೇಶದಲ್ಲಿರುವ ವಿದ್ಯುತ್ ಟ್ರಾನ್ಸ್ ಫಾರ್ಮರ್ ಸುತ್ತಲೂ ಗಿಡಗಂಟಿ ಹಾಗೂ ಬಳ್ಳಿಗಳು ದಟ್ಟವಾಗಿ ಆವರಿಸಿರುವುದರಿಂದ ವಿದ್ಯುತ್ ಉಪಕರಣಗಳು ಸ್ಪಷ್ಟವಾಗಿ ಕಾಣದಂತಾಗಿದೆ. ತುರ್ತು ಸಂದರ್ಭ ನಿರ್ವಹಣಾ ಕಾರ್ಯ ಕೈಗೊಳ್ಳಲು ಇದು ತೊಂದರೆಯಾಗುವ ಸಾಧ್ಯತೆ ಇದೆ. ಅದರಲ್ಲೂ ಟ್ರಾನ್ಸ್‌ಫಾರ್ಮರ್ ಪಕ್ಕದಲ್ಲೇ ಪ್ರವಾಸಿಗರು ವಾಹನಗಳನ್ನು ನಿಲ್ಲಿಸುವುದರಿಂದ ವಿದ್ಯುತ್ ಅವಘಡ ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಕಾಡುತ್ತಿದೆ. ಮಳೆಗಾಲದಲ್ಲಿ ಗಿಡಗಂಟಿಗಳು ಮತ್ತಷ್ಟು ವೇಗವಾಗಿ ಬೆಳೆಯುತ್ತಿದ್ದು, ಅವು ವಿದ್ಯುತ್ ತಂತಿಗಳಿಗೆ ತಾಗುವ ಸಾಧ್ಯತೆಯೂ ಇದೆ. ಅದರಿಂದ ಶಾರ್ಟ್ ಸರ್ಕ್ಯೂಟ್, ಬೆಂಕಿ ಅವಘಡ ಸೇರಿ ವಿವಿಧ ರೀತಿಯ ಅಪಾಯಗಳು ಸಂಭವಿಸ ಬಹುದಾಗಿರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಕೂಡಲೇ ಗಿಡಗಂಟಿ ತೆರವುಗೊಳಿಸಬೇಕಾಗಿದೆ. ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರ ಸುರಕ್ಷತೆಗೆ ಆದ್ಯತೆ ನೀಡಬೇಕಾಗಿದೆ. ಸಾರ್ವಜನಿಕರು ಹಾಗೂ ವಾಹನಗಳ ಸಂಚಾರ ಹೆಚ್ಚಿರುವ ಪ್ರದೇಶದಲ್ಲಿ ಇಂತಹ ಅಪಾಯಕಾರಿ ಪರಿಸ್ಥಿತಿ ಮುಂದುವರಿಯಲು ಅವಕಾಶ ನೀಡದೆ ಸೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಟ್ರಾನ್ಸ್‌ಫಾರ್ಮರ್ ಸುತ್ತ ಬೆಳೆದಿರುವ ಗಿಡಗಂಟಿ ತೆರವುಗೊಳಿಸಿ ಸುರಕ್ಷತಾ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಜಿಲ್ಲೆಯ 4 ತಾಲೂಕುಗಳಲ್ಲಿ ಎನ್ ಆರ್‌ಸಿಗಳಿಗೆ ಅನುಮೋದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆ ಸುಧಾರಣೆಗೆ ಮಹತ್ವದ ಹೆಜ್ಜೆಯಾಗಿ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಹೊಸ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರಗಳ ಸ್ಥಾಪನೆಗೆ ಅನುಮೋದನೆ ದೊರೆತಿದೆ ಎಂದು ಸಂಸದ ಶ್ರೇಯಸ್ ಎಂ. ಪಟೇಲ್ ತಿಳಿಸಿದ್ದಾರೆ.

ಸಂಸತ್ತಿನಲ್ಲಿ ತಾವು ಕೇಳಿದ ಪ್ರಶ್ನೆಗೆ ಕೇಂದ್ರ ಸರ್ಕಾರ ಉತ್ತರ ನೀಡಿದೆ. 202627ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ ಘೋಷಣೆ ಮಾಡಿದಂತೆ ಅರಸೀಕೆರೆ, ಬೇಲೂರು, ಸಕಲೇಶಪುರ ಹಾಗೂ ಅರಕಲಗೂಡು ತಾಲೂಕುಗಳಲ್ಲಿ ಹೊಸ ಕೇಂದ್ರಗಳನ್ನು ಸ್ಥಾಪಿಸಲು ಅನುಮೋದನೆ ದೊರೆತಿದೆ ಎಂದು ಅವರು ಹೇಳಿದ್ದಾರೆ.

ಈಗಾಗಲೇ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 20 ಹಾಸಿಗೆಗಳ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಇದೀಗ ನಾಲ್ಕು ತಾಲೂಕುಗಳಲ್ಲಿ ಮತ್ತಷ್ಟು ಕೇಂದ್ರಗಳು ಆರಂಭವಾಗುವುದರಿಂದ ಗ್ರಾಮೀಣ ಪ್ರದೇಶಗಳ ಅಪೌಷ್ಟಿಕ ಮಕ್ಕಳಿಗೆ ಸ್ಥಳೀಯವಾಗಿಯೇ ಅಗತ್ಯ ಚಿಕಿತ್ಸಾ ಹಾಗೂ ಪೌಷ್ಟಿಕ ಸೇವೆಗಳು ದೊರೆಯಲಿವೆ ಎಂದು ಅವರು ತಿಳಿಸಿದ್ದಾರೆ.

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಪೌಷ್ಟಿಕ ಆಹಾರ, ವೈದ್ಯಕೀಯ ಆರೈಕೆ ಹಾಗೂ ನಿರಂತರ ಆರೋಗ್ಯ ಮೇಲ್ವಿಚಾರಣೆ ಒದಗಿಸುವಲ್ಲಿ ಕೇಂದ್ರ ಗಳು ಪ್ರಮುಖ ಪಾತ್ರ ವಹಿಸಲಿವೆ. ಮಕ್ಕಳ ಆರೋಗ್ಯ ಬಲಪಡಿಸುವ ಮೂಲಕ ಅವರ ಬೆಳವಣಿಗೆಗೆ ಈ ಕೇಂದ್ರಗಳು ನೆರವಾಗಲಿವೆ ಎಂದರು.

### ಹಾಸನಾಂಬೆ ದೇವಾಲಯ ಸಮಗ್ರ ಅಭಿವೃದ್ಧಿಗೆ ಪ್ರಯತ್ನ

ನಗರದ ಅಧಿದೇವತೆ ಶ್ರೀ ಹಾಸನಾಂಬೆ ದೇವಾಲಯದಲ್ಲಿ ಭಕ್ತರಿಗೆ ಅಗತ್ಯ ಮೂಲಸೌಕರ್ಯ ಹಾಗೂ ಸೌಲಭ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆದಿರುವು ದಾಗಿಯೂ ತಿಳಿಸಿದ್ದಾರೆ.

ಇತ್ತೀಚೆಗೆ ಲೋಕಸಭೆಯಲ್ಲಿ ಹಾಸನಾಂಬೆ ದೇವಾಲಯದ ಅಭಿವೃದ್ಧಿ ಹಾಗೂ ಭಕ್ತರಿಗೆ ಅಗತ್ಯ ಸೌಲಭ್ಯಗಳ ಕುರಿತು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿರುವುದಾಗಿ ಅವರು ಹೇಳಿದ್ದಾರೆ. ಪ್ರಸ್ತುತ ಹಾಸನಾಂಬೆ ದೇವಾಲಯ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಕೇಂದ್ರ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಇಲ್ಲ. ಅಲ್ಲದೆ, ದೇವಾಲಯಕ್ಕೆ ಸಂಬಂಧಿಸಿದ ಯಾವುದೇ ಯೋಜನೆಯು ಸದ್ಯ ಪ್ರಸಾದ್ ಯೋಜನೆಯಡಿ ಪರಿಗಣನೆಯಲ್ಲಿಲ್ಲ ಎಂದು ಕೇಂದ್ರ ಉತ್ತರ ನೀಡಿದೆ.

ಹಾಸನಾಂಬೆ ದೇವಾಲಯದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವ ಮತ್ತು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಭಕ್ತರ ಸಂಖ್ಯೆ ಪರಿಗಣಿಸಿ, ದೇವಾಲಯದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಸಂಸದರು ತಿಳಿಸಿದ್ದಾರೆ. ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಉತ್ತಮ ಮೂಲಸೌಕರ್ಯ ಹಾಗೂ ಅಗತ್ಯ ಸೌಲಭ್ಯ ಕಲ್ಪಿಸುವುದರ ಜೊತೆಗೆ ಹಾಸನದ ಧಾರ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು ತಮ್ಮ ಉದ್ದೇಶವಾಗಿದೆ. ಹಾಸನದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವವನ್ನು ರಾಷ್ಟ್ರ ಮಟ್ಟದಲ್ಲಿ ಮತ್ತಷ್ಟು ಪರಿಚಯಿಸುವ ನಿಟ್ಟಿನಲ್ಲಿಯೂ ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

# ಆ. 25ರಂದು ಚ.ರಾ.ಪಟ್ಟಣದಲ್ಲಿ ಅರೆ ಬೆತ್ತಲೆ ಮೆರವಣಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಭಾರತ ರತ್ನ, ಸಂವಿಧಾನ ಶಿಲ್ಪಿ, ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡಲು ವಿಳಂಬ ಮಾಡುತ್ತಿರುವ ತಾಲ್ಲೂಕು ಆಡಳಿತ ಕಾರ್ಯವೈಖರಿ ಖಂಡಿಸಿ ಆ.25ರಂದು ಅರ ಬೆತ್ತಲೆ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮುಖಂಡ ನಂಜುಂಡ ಮೈಮ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಪಟ್ಟಣದ ಮಿನಿವಿಧಾನಸೌಧದ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪಿಸಿ 10 ತಿಂಗಳು ಕಳೆದರೂ ಇದುವರೆಗೆ ಲೋಕಾರ್ಪಣೆ ಮಾಡಿಲ್ಲ. ಪ್ರತಿಮೆ ಲೋಕಾರ್ಪಣೆ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಪ್ರತಿಮೆ ಎದುರಿನಲ್ಲಿಯೇ ಪ್ರತಿಭಟನೆ ನಡೆಸಿ ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದರೂ ತಾಲೂಕು ಆಡಳಿತ ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ. ಇದೊಂದು ನಾಚಿಕೆಗೇಡಿನ ಸಂಗತಿಯಾಗಿದೆ. ಪ್ರತಿಮೆ ತಂದು ನಿಲ್ಲಿಸಿ 10 ತಿಂಗಳು ಕಳೆದರೂ ಇನ್ನೂ ಅನಾವರಣ ಮಾಡಲು ಹಿಂದೇಟು ಹಾಕುತ್ತಿರುವುದು ಏಕೆ ಎಂದು ಪ್ರಶ್ನಿಸಿದರು.

ಸರ್ಕಾರದ ಶಿಷ್ಟಾಚಾರದ ಪ್ರಕಾರ ಆದಷ್ಟು ಬೇಗ ಲೋಕಾರ್ಪಣೆಗೆ ಕ್ರಮ ಕೈಗೊಳ್ಳಬೇಕು, ವಿಳಂಬ ಮಾಡುವುದಾದರೆ ನಮಗೆ ಅವಕಾಶ ನೀಡಿದರೆ ಎಲ್ಲಾ ವ್ಯವಸ್ಥೆ ಅಚ್ಚುಕಟ್ಟಾಗಿ ನಿಭಾಯಿಸಿ ಅನಾವರಣ ಮಾಡಲಾಗುವುದು ಎಂದರು.

ಆ.25 ರಂದು ಹಮ್ಮಿಕೊಂಡಿರುವ ಅರೆ ಬೆತ್ತಲೆ ಚಳವಳಿಯಲ್ಲಿ ತಾಲೂಕಿನ ದಲಿತ ಸಂಘಟನೆಗಳು ಸೇರಿದಂತೆ ಹಲವು ಪ್ರಗತಿಪರ ಸಂಘಟನೆಗಳು ಭಾಗಿಯಾಗಲಿವೆ. ಪಟ್ಟಣದ ಕೆಆರ್ ವೃತ್ತದಿಂದ ತಾಲ್ಲೂಕು ಕಚೇರಿ ಆವರಣದಲ್ಲಿನ ಅಂಬೇಡ್ಕರ್ ಪುತ್ಥಳಿ ವರೆಗೆ ಅರೆಬೆತ್ತಲೆ ಮೆರವಣಿಗೆ ನಡೆಸಿ ನಂತರ ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಗುವುದು ಎಂದರು.

ಬಿಜೆಪಿ ಮುಖಂಡರಾದ ಪರಮ ಗಂಗಾಧರ್, ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತ್, ಗನ್ನಿ ವಿಶ್ವನಾಥ್, ಮುಖಂಡರಾದ ಮಣಿಕಂಠ, ಸಿ.ಜಿ.ಕುಮಾರ್ ಭಾಗವಹಿಸಿದ್ದರು.

# ಲಯನ್ಸ್ ಸಂಸ್ಥೆಯಿಂದ ವನಮಹೋತ್ಸವ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು ತಾಲ್ಲೂಕಿನ ಅರೇಹಳ್ಳಿ ಹಾಗೂ ಲಯನ್ಸ್ ಸಂಸ್ಥೆ ವತಿಯಿಂದ ಕಾನಳ್ಳಿ ಅರಣ್ಯದಂಚಿನ ಗ್ರಾಮವಾದ ಶಿರಗೂರು ಎಂಬಲ್ಲಿ ಹಣ್ಣಿನ ಸಸಿಗಳನ್ನು ನೆಡುವ ಮೂಲಕ ವನಮಹೋತ್ಸವ ಆಚರಿಸಲಾಯಿತು.

ಬೇಲೂರು ಲಯನ್ಸ್ ಕಾರ್ಯದರ್ಶಿ ಪೂವಯ್ಯ ಮಾತನಾಡಿ, ಕಾಡಿನಲ್ಲಿ ಹಣ್ಣಿನ ಗಿಡಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿರುವ ಪರಿಣಾಮ ಕಾಡಿನಲ್ಲಿ ಇರಬೇಕಾದ ಆನೆ ಸೇರಿ ಇತರ ಪ್ರಾಣಿಗಳು ಆಹಾರ ಅರಸಿ ನಾಡಿಗೆ ಬಂದು ತೊಂದರೆ ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ನಮ್ಮ ಸಂಸ್ಥೆಯು ಕಾಡುಪ್ರಾಣಿಗಳಿಗೆ ತಿನ್ನಲು ಅಗತ್ಯವಿರುವ ಹಲಸು, ನೇರಳೆ, ಸೀಬೆ ಸೇರಿ ಸುಮಾರು 300 ಗಿಡಗಳನ್ನು ಮುಖ್ಯ ರಸ್ತೆಯ ಬದಿ ಹಾಗೂ ಖಾಲಿಯಿರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ನೆಡುವ ಮೂಲಕ ಕಾಡುಪ್ರಾಣಿಗಳಿಗೆ ನೈಸರ್ಗಿಕವಾಗಿ ಆಹಾರವನ್ನು ಪೂರೈಸಲು ಸಾಧ್ಯವಾಗುತ್ತದೆ. ಹೀಗಾಗಿ ವನಮಹೋತ್ಸವದ ಅಂಗವಾಗಿ ಹಣ್ಣಿನ ಗಿಡಗಳನ್ನು ನಾಟಿ ಮಾಡುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಅರೇಹಳ್ಳಿ ಲಯನ್ಸ್ ಸಂಸ್ಥೆ ಅಧ್ಯಕ್ಷ ಸತೀಶ್ ಪೂಜಾರಿ, ಕಾರ್ಯದರ್ಶಿ ಸೌಜನ್ಯ ಪೃಥ್ವಿರಾಜ್, ಪ್ರಾಂತೀಯ ರಾಯಭಾರಿ ರವಿ ಸೋಮಯ್ಯ, ಖಜಾಂಚಿ ಗುರು ಪ್ರಸಾದ್, ಸಹ ಕಾರ್ಯದರ್ಶಿ ಲಲಿತ್, ಬೇಲೂರು ಸಂಸ್ಥೆಯ ಅಧ್ಯಕ್ಷ ಮುಕ್ತರ್ ಅಹಮದ್, ರಶ್ಮಿ ಸೋಮಯ್ಯ, ಪ್ರವೀಣ್, ಬೃಂದನ್, ಸಂತೋಷ್, ಫೆಲಿಕ್ಸ್, ಪೂರ್ಣೇಶ್ ಮತ್ತಿತರರಿದ್ದರು.

# ದೇವಾಲಯದಲ್ಲಿ ಆಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ವರಮಹಾಲಕ್ಷ್ಮಿ ಹಬ್ಬದ ಹಿನ್ನಲೆಯಲ್ಲಿ ದೇವರಿಗೆ ಅಲಂಕಾರ ಮಾಡಿದ್ದನ್ನು ದುರುಪಯೋಗಪಡಿಸಿಕೊಂಡ ಕಳ್ಳರು ತಡರಾತ್ರಿ ಒಳನುಗ್ಗಿ 10 ಗ್ರಾಂ ಚಿನ್ನಾಭರಣ, 150 ಗ್ರಾಂ ತೂಕದ ಬೆಳ್ಳಿ ಆಭರಣ ಹಾಗೂ ಹುಂಡಿ ಹಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ನರೆಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಎನ್.ನಟರಾಜ ಅವರು ಗುರುವಾರ ಯಲ್ಲಮ್ಮ ದೇವಿಗೆ ವಿಶೇಷ ಅಲಂಕಾರ ಮಾಡಿ ಅರ್ಚಕ ಯೋಗೇಶ್ ಅವರು ಪೂಜೆ ಮುಗಿಸಿದ ಬಳಿಕ ಬೀಗ ಹಾಕಿ ತೆರಳಿದ್ದರು.

ಬೆಳಿಗ್ಗೆ ಬಂದು ನೋಡಿದಾಗ ದೇಗುಲದ ಬಾಗಿಲು ಮುರಿದಿರುವುದು ಗೊತ್ತಾಗಿದೆ. ದೇವರ ಮೂರ್ತಿಗೆ ಹಾಕಿದ್ದ 2 ಬೆಳ್ಳಿ ಛತ್ರಿ, 2 ಬೆಳ್ಳಿ ಮುಖವಾಡ, 2 ನಾಗ ಆಭರಣ, 2 ಜೊತೆ ಬಂಗಾರದ ಓಲೆ, 2 ಮೂಗು ನತ್ತು, 2 ಚಿನ್ನದ ತಾಳಿ ಹಾಗೂ ಹುಂಡಿ ಹಣ ಕಳವು ಮಾಡಲಾಗಿದೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ



## ಆಗಸ್ಟ್-23

2023: ಇಸ್ರೋದ ಚಂದ್ರಯಾನ-3 ನ ವಿಕ್ರಮ್ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದ ಸಮೀಪ ಯಶಸ್ವಿಯಾಗಿ ಇಳಿಯಿತು. ಇದರೊಂದಿಗೆ ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದ ನಾಲ್ಕನೇ ದೇಶ ಹಾಗೂ ಚಂದ್ರನ ದಕ್ಷಿಣ ಧ್ರುವ ಪ್ರದೇಶದ ಸಮೀಪ ಇಳಿದ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಯಿತು. ಈ ಐತಿಹಾಸಿಕ ಸಾಧನೆಯ ಸ್ಮರಣಾರ್ಥ ಆಗಸ್ಟ್ 23ರಂದು ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನಾಗಿ ಘೋಷಿಸಲಾಗಿದೆ.

1966: ಅಮೆರಿಕದ ಲೂನಾರ್ ಆರ್ಬಿಟರ್ 1 ಬಾಹ್ಯಾಕಾಶ ನೌಕೆ ಚಂದ್ರನ ಕಕ್ಷೆಯಿಂದ ಭೂಮಿಯ ಮೊದಲ ಚಿತ್ರವನ್ನು ಸೆರೆಹಿಡಿಯಿತು.

1939: ನಾಜಿ ಜರ್ಮನಿ ಮತ್ತು ಸೋವಿಯತ್ ಒಕ್ಕೂಟ ಮೊಲೊಟೊವ್ ರಿಬೆಂಟ್ರೋಪ್ ಒಪ್ಪಂದಕ್ಕೆ ಸಹಿ ಹಾಕಿದವು.

1990: ಅರ್ಮೇನಿಯಾದ ಸ್ವಾತಂತ್ರ್ಯ ಘೋಷಣೆ

# ಮುತ್ತಜ್ಜಿ-1

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-54**



ಚೆಂಡು ಬಹಳ ವೇಗವಾಗಿ ಇಟ್ಟಿಗೆ ಗೂಡಿನ ಕಡೆಗೆ ಹೋಗ್ತಿತ್ತು. ಅವರ ಲೆಕ್ಕದಲ್ಲಿ ಅದೇ ಬೌಂಡರಿ. ಗಿಡಗಂಟಿ ಕಲ್ಲನ್ನೆಲ್ಲಾ ಹಾರಿಹಾರಿ ಚೆಂಡು ಹಿಡಿಯಲು ಹೋಗ್ತಿದ್ದ ದಿವಾಕರ. ಕಾಲಿಗೇನೋ ಸಿಕ್ಕಿ ಹಾಕಿಕೊಂಡ ಹಾಗಾಯ್ತು, ಮುಂದೇನಾಗ್ತಿದೆ ಎನ್ನೋದ್ರೊಳಗೆ ಹಾರಿ ಬಿದ್ದಿದ್ದ. ಮೈದಾನದಲ್ಲಿದ್ದವರೆಲ್ಲಾ ಜೋರಾಗಿ ನಗಲು ಆರಂಭಿಸಿದರು. ಅದೇನೋ ಹೇಳ್ತಾರಲ, ಬಿದ್ರೂ ಮೀಸೆ ಮಣ್ಣಾಗ್ಲಿಲ್ಲ ಅಂತ ಹಾಗೆ ಎದ್ದು ಏನೂ ಆಗಿಲ್ಲ ಅನ್ನೋ ತರ ಮೈ ಕೊಡವಿಕೊಂಡ. ಪುಣ್ಯಕ್ಕೆ ಗಾಯವೇನೂ ಆಗಿರಲಿಲ್ಲ. ಬಟ್ಟೆಯೆಲ್ಲಾ ಮಣ್ಣಾಗಿತ್ತು, ಚೆಂಡು ಬೌಂಡರಿ ದಾಟಿತ್ತು. ಆಟ ಮುಗಿಯಿತು. ಹೆಚ್ಚಿನ ದಿನಗಳಲ್ಲಿ ನಡೆಯುವಂತೆ ಇವರೇ ಸೋತಿದ್ದರು. ಮನೆಗೆ ಬಂದು, ಶರಟು ಬಿಚ್ಚಾಕಿ, ಬೇರೆ ಬಟ್ಟೆ ಹಾಕಿಕೊಳ್ಳುವ ಮುಂಚೆ ಕೈಕಾಲು ಮುಖ ತೊಳೆಯಲು ಬಚ್ಚಲಿಗೆ ಹೋಗ್ತಿರುವಾಗ ಅಮ್ಮನ ಬೈಗುಳ ಹಿಂಬಾಲಿಸಿಕೊಂಡೇ ಬಂದವು. ಬೇರೆ ಏನೂ ಕೆಲಸ ಇರೋಲ್ಲ ನೋಡು ಅವುಕ್ಕೂ. ಆ ಕಪಿ ಸೈನ್ಯಕ್ಕೆ ಇದೊಂದು ದೊಡ್ಡ ಕಪಿ, ಅವುಗಳದ್ದೆಲ್ಲ ಸಣ್ಣಪುಟ್ಟ ಚೇಷ್ಟೆಯಾದ್ರೆ ಇವನದ್ದು ಸ್ವಲ್ಪ ಘನಂಧಾರಿ. ನಾಳೆಯಿಂದ ಈ ಬ್ಯಾಟು, ಗೂಟ ಎಲ್ಲಾ ನಮ್ಮನೇಲಿಡದು ಬ್ಯಾಡ. ಇದೇನು ಸ್ಟೋರ್‍ರೂಮಾ? ಕಸ ಗುಡಿಸುವಾಗ ಅವನ್ನ ಎತ್ತಿಟ್ಟೇ ಸಾಕಾಗಿ ಹೋಗುತ್ತೆ.

ಇದು ದಿನಾ ಇದ್ದಿದ್ದೇ. ನಾಳೆ ನಾಡಿದ್ದುಗಳಷ್ಟೇ ಅಲ್ಲ, ಮುಂದಿನ ವರ್ಷ ಸಹಾ ಆ ಬ್ಯಾಟು, ಗೂಟಗಳು ಅಲ್ಲಿ ಚಪ್ಪಲಿ ಬಿಡೋ ಮೂಲೆ ಇದೆಯಲ್ಲ ಅಲ್ಲೆ ಗೋಡೆಗೆ ಒರಗಿ ಕೂತಿರ್‍ತವೆ. ಅಮ್ಮ ಅದೇ ಹಾಡನ್ನ ತಿರುಗ್ಸಿ ತಿರುಗ್ಸಿ ಹಾಡುತ್ತೆ ಅಂತ ಗೊತ್ತು. ಕೈಕಾಲಿಗೆ ನೀರು ತಾಗಿಸಿದಾಗ ಕೆಲವು ಕಡೆ ಉರಿಯಾಯ್ತು. ಟೈಲರ್ ಅಬ್ಬಾಸ್ ಹೊಲಿದುಕೊಟ್ಟಿದ್ದ ನೀಲಿ ಶರಟನ್ನು ಏರಿಸಿಕೊಂಡು, ಕೊಳೆಯಾಗಿದ್ದ ಶರಟಿನ ಜೇಬಲ್ಲಿದ್ದ ಚೀಟಿ, ದುಡ್ಡು ತೆಗೆದುಹಾಕಿಕೊಳ್ಳಬೇಕೆಂದು ಜೇಬಿನಲ್ಲಿ ಕೈಯಾಡಿಸಿದರೆ, ಅರೆ! ಎಂಥದೂ ಇಲ್ಲ! ಎಲ್ಲೋಯ್ತು? ಸೀದಾ ಓಡಿದ ಮೈದಾನಕ್ಕೆ. ಅದೇನೂ ಹೆಚ್ಚು ದೂರ ಇಲ್ಲ. ಅವನು ಬಿದ್ದಿದ್ದ ಜಾಗಕ್ಕೇ ಹೋದ. ಹುಡುಕಿದೆ, ಸಿಕ್ಕಲೇ ಇಲ್ಲ. ಜೇಬಲ್ಲಿ ಇದ್ದದ್ದು ಕೇವಲ ಹದಿನಾರು ರೂಪಾಯಿ ಮಾತ್ರ. ಸ್ವಲ್ಪ ಬೇಕಾದ್ದು, ಬೇಡದ್ದು ಚೀಟಿಗಳು. ಚೀಟಿಗಳು ಹರಿದು ಅಲ್ಲೇ ಬಿದ್ದಿದ್ದವು, ದುಡ್ಡಿರಲಿಲ್ಲ.

ಇನ್ನು ಅಮ್ಮನೇ ಗತಿ, ಏನಾದ್ರೂ ಮಾಡಿ ಹತ್ತು ರೂಪಾಯಿ ಇಸ್ಕೋಬೇಕೆಂದುಕೊಂಡು ವಾಪಾಸ್ ಹೊರಡುತ್ತಿದ್ದವನಿಗೆ ಮತ್ತೇನೋ ಕಾಲಿಗೆ ಸಿಕ್ಕಿಕೊಂಡಂತಾಯ್ತು. ಕೆಳಗೆ ನೋಡಿದರೆ ಲಾಡಿಯ ತರಹದ್ದು, ಅವನು ಬೀಳೋದ್ಕೂ, ದುಡ್ಡು ಕಳ್ಕೋಳೋಕೂ ಇದೇ ಕಾರಣ ಎಂದು ಕಾಲಲ್ಲಿ ಜಾಡಿಸಿದ. ಅದು ನಾನು ನಿನ್ನಪ್ಪ ಎನ್ನುವಂತೆ ಹಾಗೆಯೇ ಇತ್ತು. ಯಾರೂ ಅವನ ಈ ಪೌರುಷ ಪ್ರದರ್ಶನ ನೋಡದಿದ್ರೂ, ಅವನಿಗೆ ಅವಮಾನವಾದಂತಾಯ್ತು. ಅತ್ತಿತ್ತ ನೋಡಿ ಕೈಯಿಂದ್ಲೆ ಎಳೆದುಹಾಕಿದ. ಹಾ! ಅದೇ, ಹೌದು; ಅದೇ ಎಲೆಯಡಿಕೆ ಚೀಲ. ಐದಾರು ಕೋಣೆಗಳಿರುವಂತೆ ಹೊಲಿದ ಚೀಲಕ್ಕೆ ಸುತ್ತಿ ಬಿಗಿ ಮಾಡಲು ಉದ್ದವಾದ ಲಾಡಿಯಿರುತ್ತೆ. ಅವನ ಮುತ್ತಜ್ಜಿ ಉಪಯೋಗಿಸ್ತಿದ್ದುದು ಅಂತ ಕಾಣುತ್ತೆ. ಅಜ್ಜಿ ತೀರಿಹೋದಾಗ ಅದರ ಎಲ್ಲಾ ವಸ್ತುಗಳನ್ನ ಹಾಲಿ, ಕೆಂಚಿಯರಿಗೆ ಕೊಟ್ಟಿದ್ದು ಗೊತ್ತು, ಬೇಕಾದ್ದು ತಗೊಂಡ್ಹೋಗಿ ಬೇಡದ ಈ ಎಲೆಯಡಿಕೆ ಚೀಲ ಎಸೆದುಹೋಗಿದ್ದಾರೆ. ಅದು ಏಳೆಂಟು ತಿಂಗಳು ಮುಗಿಯೋದ್ನ ಕಾದಿದ್ದು ಈಗ ಈ ಮರಿಮಗನಿಗೆ ಸಿಕ್ಕಿದೆ. ಅದನ್ನು ನೋಡಿ ಆತನಿಗೆ ಯಾರೋ ಕಪಾಳಕ್ಕೆ ಬಾರಿಸಿದ ಹಾಗಾಯ್ತು. ಮನಸ್ಸಿಗೆ ಒಂದು ರೀತಿಯ ಹಳಹಳಿಕೆ, ಅಪರಾಧಿ ಪ್ರಜ್ಞೆ ಸುತ್ತಿಕೊಳ್ಳತೊಡಗಿತು. ಮನೆಗೆ ಸೀದಾ ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡು ನೆನಪಿಸಿಕೊಳ್ಳಲಾರಂಭಿಸಿದ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248